# ಕಲೆ: ಹೊಸ ಆವಿಷ್ಕಾರದ ಕನಸು



## ಗಾನವಿ ಲಕ್ಷ್ಮಣ್

### ಕಲರ್ಸ್ ಸೂಪರ್‌ನ 'ಮಗಳು ಜಾನಕಿ'ಯ ಜಾನಕಿ

★ *ನಿಮ್ಮನ್ನು ನೋಡಿ 'ಅಯ್ಯೋ ಪಾಪ' ಎಂದು ಯಾರಾದರೂ ಮರುಕಪಟ್ಟಿದ್ದಾರಾ?*

ಜಾನಕಿಯದು ತುಂಬಾ ಸೌಮ್ಯ ಸ್ವಭಾವದ ಪಾತ್ರ ಎಂದು ಹೇಳಿದ್ದಾರೆ. ಜಾಸ್ತಿ ಅಳಿಸಬೇಡಿ, ಗೋಳು ಕೊಡಬೇಡಿ ಎಂದಿದ್ದನ್ನು ಕೇಳಿದ್ದೇನೆ.

★ *ಜಾನಕಿಯಾಗಿ ಕಾಣಿಸಿಕೊಂಡಿದ್ದು ಹೇಗೆ?*

ಚಿಕ್ಕಮಗಳೂರಿನ ಕೃಷಿ ಕುಟುಂಬ ನಮ್ಮದು. ಕಲಾ ವಿದ್ಯಾರ್ಥಿಯಾದ ನನಗೆ ಹೊಸ ಆವಿಷ್ಕಾರಗಳನ್ನು ಮಾಡುವ ಕುತೂಹಲ. ನಾಟ್ಯ ಕಲಿತಿದ್ದ ನಾನು ಅದನ್ನೇ ಕಲಿಸುತ್ತಿದ್ದೆ. ನಾಟ್ಯ ಕಲೆಯ ಮತ್ತೊಂದು ಆಯಾಮ ನಟನೆ. ಅದನ್ನು ಕಲಿಯಬೇಕೆಂದು ರಂಗಭೂಮಿಗೆ ಪ್ರವೇಶ ಮಾಡಿದೆ. ಅನೇಕ ರಂಗ ತಂಡಗಳಲ್ಲಿ ತೊಡಗಿಕೊಂಡೆ. ರಂಗಭೂಮಿ ಸಂಬಂಧಿಸಿದ ಕಾರ್ಯಾಗಾರ, ಸಂವಾದ, ಅಭಿನಯ ಆರಂಭವಾಯಿತು. ಈ ನೆಪದಲ್ಲಿ ದೇಶವ್ಯಾಪಿ ಸಂಚಾರ ಮಾಡಿದೆ. ನಟನೆ– ನೃತ್ಯದ ಪಾಠವನ್ನು ಅನೇಕ ಶಾಲೆಗಳಲ್ಲಿ ಹೇಳಿಕೊಡಲು ಆರಂಭಿಸಿದೆ. ಮತ್ತೆ ಹುಡುಕಾಟ ಆರಂಭವಾಯಿತು. ಹೇಳಿಕೊಡಲು ಹೊಸದನ್ನು ಕಲಿಯಬೇಕು ಎನ್ನಿಸತೊಡಗಿತು. ಕ್ಯಾಮೆರಾ ಎದುರಿಸಬೇಕು ಎನ್ನುವ ಬಹುದಿನಗಳ ಕನಸು ಮತ್ತೆ ಚಿಗುರೊಡೆಯಿತು. ಮನದ ಯಾವುದೋ ಮೂಲೆಯಲ್ಲಿ ಭಯವೂ ಇತ್ತು. ಅದನ್ನು ಮೀರಲೇಬೇಕು ಎನ್ನುವ ಧೈರ್ಯವೂ ನನ್ನಲ್ಲೇ ಇತ್ತು. ಸ್ವಯಂ ಪ್ರೇರಣೆಯಿಂದ ಟಿವಿಗೆ ಬಂದೆ. ಅನುಭವಿ, ಅತ್ಯುತ್ತಮ ನಿರ್ದೇಶಕರಲ್ಲಿ ಒಬ್ಬರಾದ ಟಿ.ಎನ್. ಸೀತಾರಾಮ್ ಅವರ ಜೊತೆ ಕೆಲಸ ಮಾಡುವುದು ಖುಷಿಯನ್ನು ಉಂಟುಮಾಡಿದೆ.

★ *ಭಯವನ್ನು ಹೇಗೆ ಹತ್ತಿಕ್ಕಬೇಕು?*

ಭಯ ಎನ್ನುವುದು ನಮ್ಮ ದೃಷ್ಟಿಗೆ ಕತ್ತಲನ್ನು ಆವರಿಸುತ್ತದೆ. ಆ ಸತ್ಯವನ್ನು ಅರಿತು, ಸ್ವಯಂ ಪ್ರೇರಣೆಯಿಂದ ಧೈರ್ಯದಿಂದ ಭಯವನ್ನು ಓಡಿಸಿ ಬೆಳಕಿನತ್ತ ಸಾಗಬೇಕು. ಬೇರೆಯವರು ಹೇಳಿದರು ಎನ್ನುವುದಕ್ಕಿಂತ ನಾನು ಕಲೆಯನ್ನು ಗಂಭೀರವಾಗಿ ತೆಗೆದುಕೊಳ್ಳುತ್ತೇನೆ ಎಂದು ನಿರ್ಧರಿಸಬೇಕು. ಅಷ್ಟಾದ ಮಾತ್ರಕ್ಕೆ ಏನೂ ಮಾಡಿದಂತೆ ಆಗುವುದಿಲ್ಲ. ನಿತ್ಯವೂ ಹೊಸತನ್ನು ಕಲಿಯಬೇಕು. ಇಷ್ಟಪಟ್ಟ ಕಲೆಯ ಆಳವನ್ನು ಅರಿತರೆ ನಮ್ಮತನ ಗಟ್ಟಿಗೊಳ್ಳುತ್ತಾ ಆತ್ಮವಿಶ್ವಾಸ ಹೆಚ್ಚಾಗುತ್ತದೆ. ಆಮೇಲೆ ನಮ್ಮದೇ ನಿರ್ಧಾರವನ್ನು ಸುಲಭವಾಗಿ ತೆಗೆದುಕೊಳ್ಳಬಹುದು.

★ *ಮದುವೆ ಹೇಗಾಗಬಹುದು? ನಿರ್ದೇಶಕರು ಬೈತಾರ?*

ಕಥೆಯ ಬಗ್ಗೆ ನಮಗೆ ನಿರ್ದಿಷ್ಟವಾಗಿ ಗೊತ್ತಿರಲ್ಲ. ಕಥೆ ಮತ್ತು ಪಾತ್ರದ ನಿರ್ವಹಣೆ ಸ್ವಾಭಾವಿಕವಾಗಿ ಘಟಿಸಿದಂತೆ ಚಿತ್ರೀಕರಿಸಲಾಗುತ್ತಿದೆ. ಇಲ್ಲಿ ಪೂರ್ವ ಪಠ್ಯ ಎಂಬುವುದಿಲ್ಲ. ಕಥೆ ಹೀಗೆ ಎಂದು ನಿರ್ದೇಶಕರು ಹೇಳುತ್ತಾರೆ. ಅದಕ್ಕೆ ಸಿದ್ಧವಾಗುತ್ತೇವೆ. ಅವರು ಹೇಳಿದಂತೆಯೇ ಸರಳವಾಗಿ ನಿರೂಪಣೆಯಾಗುವುದಿಲ್ಲ. ಪಾತ್ರ– ಪಾತ್ರಗಳು ಮುಖಾಮುಖಿಯಾಗುವ ಸನ್ನಿವೇಶದಲ್ಲಿ ಕಥೆ ಸೃಜನಾತ್ಮಕ ಮಜಲು ಪಡೆಯುತ್ತಲೇ ಇರುತ್ತದೆ.

ಸೀತಾರಾಮ್ ಸರ್ ಕೆಲಸ ಮಾಡುವ ಶೈಲಿ ಅನನ್ಯವಾದದ್ದು ಅಂತ ನನಗೆ ಅನ್ನಿಸಿದೆ. ಅವರದು ಸೌಮ್ಯ ಸ್ವಭಾವ. ದೊಡ್ಡ ನಟ– ನಿರ್ದೇಶಕ ಎನ್ನುವ ಅಹಂ ಅವರಿಗಿಲ್ಲ. ನಾನು ಪಾತ್ರವಾಗಿ ಖಾಲಿ ತಲೆಯಲ್ಲಿ ಎದುರಾಗುತ್ತೇನೆ. ಹೇಳುವುದನ್ನು ಮನಸ್ಸಿಟ್ಟು ಆಲಿಸಿ ನಟಿಸುತ್ತೇನೆ. ನಾಟಕೀಯತೆ ಇಲ್ಲದಂತೆ ಸಹಜ ರೂಪ ನೀಡುವ ಪ್ರಯತ್ನ ಮಾಡುತ್ತೇನೆ.

★ *ಮುಂದಿನ ನಿರ್ಧಾರಗಳ ಬಗ್ಗೆ ಹೇಳುವುದಾದರೆ...*

ಬೇರೆ ಬೇರೆಯದನ್ನು ಕಲಿಯುತ್ತಾ ಹೋಗಬೇಕು. ಮುಂದೆ ಏನಾಗುತ್ತೆ ಎನ್ನುವುದು ಅನಿರೀಕ್ಷಿತ. ನಟನಾ ರೀತಿಯೇ ಹಲವು. ಕಲಿತಷ್ಟೂ ಕಲಿಯಬೇಕು. ಹೊಸತನ್ನು ಆವಿಷ್ಕರಿಸಬೇಕು ಎನ್ನುವ ತುಡಿತ ನನ್ನದು. ಭರತನಾಟ್ಯ, ಕುಚಿಪುಡಿ ಇವೆಲ್ಲಾ ನೃತ್ಯದ ಹೊಸ ಶೈಲಿಯನ್ನು ಹುಡುಕುತ್ತಾ ಬೆಳೆದಿವೆ. ರಂಗಭೂಮಿ, ನಾಟ್ಯದಲ್ಲಿ ಸಾಕಷ್ಟು ಕಲಿತಿದ್ದೇನೆ. ನಿರ್ಮಾಣ ಮಾಡಬೇಕು ಎನ್ನುವ ಕನಸು ಇದೆ. ಕಲಾವಿದೆಯಾಗಿ ಸಂಚಾರಿಯಾಗಿರಬೇಕು. ಬುಡಕಟ್ಟು ಮಕ್ಕಳಿಗೆ, ಸರ್ಕಾರಿ ಶಾಲೆಗಳಲ್ಲಿ ಕಲಾ ಶಿಕ್ಷಣ ನೀಡಬೇಕು ಎಂದು ಚಿಂತಿಸಿದ್ದೇನೆ. ಇದಕ್ಕೆಲ್ಲಾ ಕಂಪನಿ, ಸಂಸ್ಥೆಯ ರೂಪ ನೀಡಿ ಸ್ಥಾವರಗೊಳಿಸಲು ನನಗಿಷ್ಟವಿಲ್ಲ. ಈ ಮೊದಲು ಅಂತಹ ಪ್ರಯೋಗಗಳನ್ನು ಮಾಡಿದ್ದೇನೆ. ಈಗ ಅದಕ್ಕಿಂತ ಭಿನ್ನ ಮತ್ತು ಪರಿಣಾಮಕಾರಿಯಾಗಿ ಮಾಡುವುದು ಎಂದರೆ, ಯಾವುದೇ ನೀತಿ– ನಿಯಮಗಳ ವ್ಯಾಪ್ತಿಗೆ ಒಳಪಡದೆ ಅವುಗಳೆಲ್ಲವನ್ನೂ ಮೀರಿ ನಮ್ಮ ಆಲೋಚನೆ, ಚಿಂತನೆಗಳನ್ನು ವಿಸ್ತರಿಸಿಕೊಳ್ಳಬೇಕು.

■ ರಾಘವೇಂದ್ರ